'ಮಾತನಾಡಲಾ... ಏನೆಂದು ಮಾತನಾಡಿಸುವುದು' ಎಂದುಕೊಳ್ಳುವಷ್ಟರಲ್ಲಿಯೇ ಆಕೆಯೇ ತೆಲುಗಿನಲ್ಲಿ, ''ನಿಮ್ಮದು ಆಂಧ್ರ ಅಲ್ಲವಾ...'' ಎಂದಳು.

ಸಾವಿತ್ರಿ ಆಕೆಯನ್ನು ಆಶ್ಚರ್ಯದಿಂದ ನೋಡಿ ''ಹೌದು'' ಎಂದಳು.

''ನಮ್ಮದು ಸಿರಿಲಂಕ...'' ಹೇಳಿದಳು ಆಕೆ.

ಕೂಡಲೇ ಆಕೆಯನ್ನು ಮನಸ್ಸಿನಲ್ಲಿಯೇ ಹೋಲಿಕೆ ಮಾಡಿಕೊಂಡಳು ಸಾವಿತ್ರಿ. ಅರೆಕ್ಷಣ ಮನಸ್ಸು ಜುಗುಪ್ಸೆ ಕೋಪದಿಂದ ಕೆರಳಿತು. ಆಕೆಯೂ ಸಾವಿತ್ರಿಯನ್ನು ಹೋಲಿಸಿಕೊಂಡು ಕೆಲ ಕ್ಷಣ ಮೌನವಾಗಿದ್ದಳು. ಆಕೆಯ ಕಣ್ಣಲ್ಲಿ ಪಟಪಟನೆ ನೀರು ಸುರಿಯುತ್ತಿದೆ.

'ಅಳಬೇಕಿರುವುದು ನಾನು. ಯಾಕೆ ಇವಳು ಅಳುತ್ತಿದ್ದಾಳೆ' ಎಂದುಕೊಂಡಳು ಸಾವಿತ್ರಿ.

ಏನೋ ಹೇಳಬೇಕೆಂದು ಆಕೆ ತುಟಿ ಬಿಚ್ಚಿದಳು. ಯಾವುದೋ ಕಾಗದಗಳನ್ನು ಹಿಡಿದು ಆಗಲೇ ಅಲ್ಲಿಗೆ ಬಂದ ರವಿ, ಚಂದ್ರು ಅವರನ್ನು ನೋಡಿ ಸುಮ್ಮನಾದಳು. ಆಕೆಯೊಂದಿಗೆ ಸಾವಿತ್ರಿಯನ್ನು ನೋಡಿದ ಚಂದ್ರು ಆತಂಕದಿಂದ, ''ದೊಡ್ಡಮ್ಮಾ'' ಎಂದು ಹಲ್ಲುಕಚ್ಚಿ ಕರೆದ.

ಸಾವಿತ್ರಿ ಚಂದ್ರು ಬಳಿ ಹೋದಳು. ಆಕೆಯನ್ನು ದೂರ ಖರ್ಜೂರದ ಮರದ ನೆರಳಿಗೆ ಕರೆದೊಯ್ದು ಸಹಿ ಮಾಡಿಸುತ್ತ, ''ನಾವು ಇಲ್ಲಿಂದ ಹೋಗುವವರೆಗೂ ಆಕೆಯನ್ನು ಭೇಟಿ ಮಾಡಬಾರದು, ಮಾತನಾಡಬಾರದು'' ಒರಟಾಗಿ ಹೇಳಿದ.

''ಅದೇನೋ... ಏಕೆ? ಇಷ್ಟಕ್ಕೂ ಆಕೆ ಯಾರು'' ಕೇಳಿದಳು ಸಾವಿತ್ರಿ.

''ಸಾಯಿಸಿದವರ ತಾಯಿ. ಎರಡು ತಿಂಗಳಾಯಿತು ಬಂದು. ಇಲ್ಲಿ ಅರಬ್ಬರ ಕಾಲಿಗೆ ಬೀಳುತ್ತಾಳೆ. ಯಾರಿಗೇನಾಗಬೇಕು. ಕತ್ತೇಗ್ ಕುದುರೇಗ್ ಸೋದರಮಾವ ಅನ್ನೋ ಹಾಗೆ ಇಲ್ಲಿ ಅವಳ ಮಾತು ಯಾರು ಕೇಳಿಸಿಕೊಳ್ಳುತ್ತಾರೆ!...'' ಎಂದ.

ರವಿ, ''ಅಬ್ಬಾ... ಇವರದು ದೊಡ್ಡ ಪುರಾಣ. ನನಗೆ ಶ್ರೀಲಂಕದ ಸ್ನೇಹಿತರಿದ್ದಾರಲ್ಲವಾ!... ಅವರು ಹೇಳಿದರು. ಅಲ್ಲಿ ಕೂಡ ನಮ್ಮಲ್ಲಿರುವಂತೆಯೇ ನಕ್ಸಲರಿದ್ದಾರಂತೆ. ಪೊಲೀಸರ ಭಯಕ್ಕೇ ಇವರು ಇಲ್ಲಿಗೆ ಬಂದಿದ್ದಾರಂತೆ'' ಹೇಳಿದ.

''ಈ ಮುದುಕಿ ಏನು ಸಾಮಾನ್ಯದವಳಾ. ಅತ್ತುಕರೆದು ನನ್ನನ್ನೇ ಬುಟ್ಟಿಯಲ್ಲಿ ಹಾಕಿಕೊಳ್ಳಬೇಕೆಂದು ನೋಡಿದಳು. ನಾನು ಬಿಡುತ್ತೀನಾ. ಒಂದು ಪೈಸೆ ಕಡಿಮೆಯಿದ್ದರೂ ನೇಣು ಗ್ಯಾರಂಟಿ ಎಂದು ಸ್ಪಷ್ಟವಾಗಿ ಹೇಳಿದೆ. ಅಷ್ಟು ಹೇಳಿದ ಹೊರತೂ ದಾರಿಗೆ ಬರಲಿಲ್ಲ'' ಚಂದ್ರು ಹೇಳಿದ.

ಅವರ ಮಾತು ಕೇಳುತ್ತಿದ್ದರೆ ಸಾವಿತ್ರಿಗೆ ಹೊಟ್ಟೆಯಲ್ಲಿ ತಳಮಳ, ಕಣ್ಣುಗಳಲ್ಲಿ ನೀರು ತುಂಬುತ್ತಿವೆ.

ರವಿ, ಚಂದ್ರು ಆಕೆಯ ಕುರಿತು ಇನ್ನೂ ಏನೇನೋ ಮಾತನಾಡಿಕೊಳ್ಳುತ್ತಿದ್ದಾರೆ. ಸಾವಿತ್ರಿ ಅವರ ಒಂದೊಂದು ಮಾತನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದಾಳೆ. ಅದರೊಂದಿಗೆ ತನ್ನ ಜೀವನದ ಹಿನ್ನೆಲೆಯನ್ನು ಹೆಣೆಯುತ್ತಿದ್ದಾಳೆ. ಆಕೆಯನ್ನೊ ನೋಡಿದರೆ ತನ್ನನ್ನು ತಾನು ನೋಡಿಕೊಂಡಂತೆ, ತನ್ನ ಕತೆಯನ್ನು ತಾನೇ ಕೇಳುತ್ತಿರುವಂತಿದೆ. ಶತ್ರುಗಳಾರೋ ತಿಳಿಯದೆ ಆತ್ಮರಕ್ಷಣೆಗಾಗಿ ಒದ್ದಾಡುತ್ತಿರುವಂತೆಯೇ ಇದೆ.

ಯಾರೋ ಕರೆದಂತಾಯಿತು. ಆಕೆ ಒಳಗೆ ಹೋದಳು. ನಂತರ ಪೊಲೀಸ್ ವ್ಯಾನ್ ಬಂದು ನಿಂತಿತು. ನಾಲ್ಕು ಮಂದಿ ಪೊಲೀಸರು ಇಬ್ಬರು ಯುವಕರನ್ನು ಒಳಗೆ ಕರೆದೊಯ್ದರು. ಒಬ್ಬ ಪೊಲೀಸ್ ಬಂದು ರವಿ ಮತ್ತು ಚಂದ್ರುವನ್ನು ಕರೆದೊಯ್ದ. ಆ ಯುವಕರನ್ನು ನೋಡಿದಳು ಸಾವಿತ್ರಿ. ಇಬ್ಬರೂ ಹೆಚ್ಚು ಕಡಿಮೆ ನಾಗರಾಜನ ವಯಸ್ಸಿನವರೇ.

ಸಾವಿತ್ರಿ ಒಂಟಿಯಾದಳು. ನಿಶ್ಶಬ್ದ ವಾತಾವರಣ. ಎಲ್ಲೋ ದೂರದಲ್ಲಿ ಒಂದೆರಡು ವಾಹನಗಳು ಆಗಾಗ ಬರ್ರ್...ರ್ರ್ ಎನ್ನುವ ಶಬ್ದ ಬಿಟ್ಟು ಎಲ್ಲಿಯೂ ಯಾವ ಶಬ್ದವೂ ಇಲ್ಲ. ಸುತ್ತಲೂ ಬಿಸಿಯ